**Code No. 08 X(B)**

# ವಾಣಿಜ್ಯ ಪರೀಕ್ಷೆಗಳು

# ಕನ್ನಡ ಬೆರಳಚ್ಚು – ಪ್ರೌಢ ದರ್ಜೆ – ಪ್ರಥಮ ಪತ್ರಿಕೆ

ಜನವರಿ / ಫೆಬ್ರವರಿ, 2020

ಸಮಯ : 15 ನಿಮಿಷಗಳು

ಅಂಕಗಳು : 100

***ಸೂಚನೆಗಳು :***

1) ಈ ಕೆಳಗೆ ಕೊಟ್ಟಿರುವ ವಿಷಯವನ್ನು 10 ರಿಂದ 75 ಸ್ಥಾನಗಳಿಗೆ ಅಂಚಿನ ತಡೆಗಳನ್ನು ಸ್ಥಿರಪಡಿಸಿಕೊಂಡು ಎರಡು ಸಾಲುಗಳ ತೆರಪಿನಲ್ಲಿ ಬೆರಳಚ್ಚು ಮಾಡಬೇಕು.
2) ಕಾಗದದ ಒಂದು ಭಾಗದಲ್ಲಿ ಮಾತ್ರ ಬೆರಳಚ್ಚು ಮಾಡಬೇಕು.
3) ತಪ್ಪಿಲ್ಲದೆ ಅಂದವಾಗಿ ಬೆರಳಚ್ಚು ಮಾಡಲು ವಿಶೇಷ ಗಮನ ಕೊಡಬೇಕು.

---

ಸಹಜತೆ ಲಕ್ಷಣ ಕೃತಕತೆ ಅವಲಕ್ಷಣ ಜೀವನವೇ ಒಂದು ನಾಟಕ ಎನ್ನುವವರಿದ್ದಾರೆ. ಪ್ರತಿಯೊಬ್ಬರೂ ಅದರಲ್ಲಿ ಪಾತ್ರಧಾರಿಗಳು. ಆದರೆ ವಾಸ್ತವದಲ್ಲಿ ಜೀವನ ನೈಜವಾದುದು, ಅದು ನಾಟಕದ ವಿನಹ ನಾಟಕವಲ್ಲ. ಜೀವನದಲ್ಲಿ ಕೊಂಚ ನಾಟಕೀಯತೆ ಇರಬಹುದು, ಆದರೆ ಜೀವನವೇ ನಾಟಕೀಯ ಆಗಬಾರದು. ನಾಟಕದಲ್ಲಿ ನಟನೆ ಮಾಡುತ್ತಾರೆ, ಅಭಿನಯ ಸಹಜವಾಗಿದ್ದರೆ ಜನ ಮೆಚ್ಚುತ್ತಾರೆ. ಆದರೆ ಜೀವನದಲ್ಲಿ ನಟನೆ ಮಾಡುವುದಕ್ಕೆ ಆಗುವುದಿಲ್ಲ. ಜೀವನವನ್ನು ಇಂಚಿಂಚು ಜೀವಿಸಬೇಕು, ಅಮೂಲ್ಯವಾದ ಜೀವನವನ್ನೇ ನಟನೆಯಾಗಿಸಿ ಕೃತಕವಾಗಿ ಜೀವಿಸುವುದು ಆತ್ಮವಂಚನೆ ಎನ್ನದೇ ವಿಧಿಯಿಲ್ಲ. ಹುಟ್ಟುಸಾವು ಸಹಜ ಪ್ರಕ್ರಿಯೆ. ಇದರಲ್ಲಿ ಯಾವುದೇ ಕೃತಕತೆ ಇರಲು ಸಾಧ್ಯವಿಲ್ಲ. ಕೆಲವು ವಿಶೇಷ ಸಂದರ್ಭಗಳಲ್ಲಿ ಶಿಶುವಿನ ಜನನದ ವಿಧಾನ ಕೃತಕವಾಗಿರಬಹುದು, ಆದರೆ ಸಾವು ಕೃತಕವಲ್ಲ.

ಇವೆರಡರ ನಡುವಿನ ನಾಲ್ಕು ದಿನಗಳ ಜೀವನ ಮಾತ್ರ ಚಿತ್ರವಿಚಿತ್ರಗಳ ಸಂಗಮ, ಜೀವನದಲ್ಲಿ ಕೆಲವು ಸಹಜ ಕ್ರಿಯೆಗಳಿದ್ದರೆ ಮತ್ತೆ ಕೆಲವು ಅಸಹಜ ಪ್ರಕ್ರಿಯೆಗಳು. ಜೀವನದ ಒಟ್ಟು ಸಾರವನ್ನರಿಯದ ಮಂದಿ ಕೃತಕತೆಯ ಮೋಹಕ್ಕೆ ಬಲಿಯಾಗಿ ಪರಿತಪಿಸುತ್ತ ಇರುವುದು ಗುಟ್ಟಾಗಿ ಉಳಿದಿಲ್ಲ. ಸಹಜವಾಗಿದ್ದು ಬಿಡುವುದು ಅಸಲಿಗೆ ಬಹಳ ಸಲೀಸು, ಅದಕ್ಕಾಗಿ ಯಾವುದೇ ವಿಶಿಷ್ಟ ಪ್ರಯತ್ನಗಳು ಬೇಕಿಲ್ಲ. ನಮ್ಮ ಸ್ವಭಾವಕ್ಕೆ ವ್ಯತಿರಿಕ್ತವಾಗಿ ಬದುಕು ನಡೆಸುವುದು ನಮ್ಮ ನಡೆನುಡಿಯೂ ಕೃತಕವಾಗಿದೆ. ಇದರಿಂದ ಭಾವನೆಗಳೂ ಯಾಂತ್ರಿಕವಾಗಿದೆ, ಇದು ನೋಡುವವರ ಕಣ್ಣಿಗೆ ವಿಭಿನ್ನವಾಗಿ ಕಾಣಿಸಬಹುದು. ಯಾರನ್ನೊ ಮೆಚ್ಚಿಸಲು ಹಾಕಿದ ಬಣ್ಣ ಬಹಳಕಾಲ ಬಾಳುವುದಿಲ್ಲ.

ಬಣ್ಣ ಮಾಸಿದಾಗ ನಮ್ಮ ಮುಸುಡಿಯೇ ನಮಗೆ ಅಪರಿಚಿತ ಎನಿಸಬಹುದು, ಆತ್ಮಸಾಕ್ಷಿಗೆ ವಿರುದ್ಧವಾಗಿ ನಾಟಕ ಮಾಡಿಕೊಂಡು ಅಡ್ಡಾಡುವುದು ಕೇವಲ ಕಾಲಹರಣ ಮಾತ್ರ. ಅಷ್ಟಕ್ಕೂ ಜೀವನವೆಂದರೆ ವೃಥಾ ಕಾಲಹರಣವೇ, ಹಾಗಾದರೆ ನಮ್ಮ ಜೀವನಕ್ಕೆ ಯಾವುದೇ ಸ್ಪಷ್ಟ ಉದ್ದೇಶಗಳಿಲ್ಲವೇ ? ನಿಜ ಜೀವನಕ್ಕೆ ಯಾವುದೇ ದಿಕ್ಕುದೆಸೆ ಇರುವುದಿಲ್ಲ, ಅದನ್ನು ಸ್ವತಃ ನಾವು ನಿರ್ಧರಿಸಬೇಕು. ಜೀವನಕ್ಕೆ ಉದ್ದೇಶವಿರುವುದಿಲ್ಲ, ಅದನ್ನು ನಾವು ಕಂಡುಕೊಂಡು ನಿಗದಿತ ಕಾಲಾವಧಿಯಲ್ಲಿ ಅದರ ಕಾರ್ಯ ಸಾಧನೆಗೆ ಪ್ರಯತ್ನಿಸಬೇಕು. ನಮ್ಮ ಜವಾಬ್ದಾರಿ ಸರಿಯಾಗಿ ನಿಭಾಯಿಸದೆ ಜೀವನವನ್ನು ದೂಷಿಸುವುದು ತರವಲ್ಲ. ಕುಣಿಯಲಾರದವಳಿಗೆ ನೆಲ ಡೊಂಕು ಎಂಬ ಗಾದೆ ಮಾತಿನಂತೆ ಜೀವನದ ಉದ್ದೇಶವನ್ನು ಅರ್ಥ ಮಾಡಿಕೊಳ್ಳದವನಿಗಿ ಜೀವನವೇ ವ್ಯರ್ಥ ಎನಿಸಿದರೆ ಆಶ್ಚರ್ಯವಿಲ್ಲ. ಸಹಜವಾಗಿ ಬದುಕುವುದು ಎಲ್ಲಾ ರೀತಿಯಿಂದ ಕ್ಷೇಮ, ಅದಕ್ಕೆ ಯಾವುದೇ ಒಗ್ಗರಣೆ ಅಗತ್ಯವಿಲ್ಲ. ಆದರೆ ಇದ್ದದನ್ನು ಇದ್ದಂಗೆ ಹೇಳಲು ಎಲ್ಲರಿಗೂ ಸಾಧ್ಯವಿಲ್ಲ, ಆದ್ದರಿಂದ ಹೇಳುವುದಕ್ಕೆ ಸ್ವಲ್ಪ ನಾಜೂಕಾಗಿ ಹೇಳುವ ತಂತ್ರಗಾರಿಕೆ ಬಳಸುತ್ತಾರೆ. ಇಲ್ಲಿ ಸರಿ ತಪ್ಪು ಪ್ರಶ್ನೆಗಿಂತ ಹೇಳುವ ನೀತಿಯಷ್ಟೇ ಭಿನ್ನವಾಗಿರುತ್ತದೆ. ಕೆಲವು ಸಂದರ್ಭಗಳಲ್ಲಿ ಇದು ಸರಿ ಇರಲೂಬಹುದು, ಸಂದರ್ಭಗಳು ಅಂತಹ ನಡವಳಿಕೆಯನ್ನು ಡಿಮಾಂಡ್ ಮಾಡುವ ಸಾಧ್ಯತೆಯೂ ಇರಬಹುದು.

ಯಾರಿಗೆ ಯಾವ ಸ್ವಭಾವ ಸಿದ್ಧಿಸಿರುತ್ತದೆಯೋ ಅವರು ಹಾಗೆಯೇ ವರ್ತಿಸಿದರೆ ಚೆನ್ನ. ಪ್ರಾರಂಭದಲ್ಲಿ ಕಿರಿಕಿರಿ ಎನಿಸಿದರೂ ಕಾಲ ಕ್ರಮೇಣ ಜನ ಅದನ್ನು ಒಪ್ಪಿಕೊಳ್ಳುತ್ತಾರೆ. ಇಲ್ಲದಿದ್ದರೆ ಮಾವಿನಹಣ್ಣಿಗೂ ಮತ್ತು ಕಿತ್ತಳೆಹಣ್ಣಿಗೂ ವ್ಯತ್ಯಾಸವಿರುವುದಿಲ್ಲ, ಸಿಂಹ ಸಿಂಹವಾಗಿರಬೇಕೇ ವಿನಹ ನರಿ ತರಹ ಆಗಬಾರದು. ಮನುಷ್ಯನ ನಡತೆ ಆಧರಿಸಿ ಲಕ್ಷಣ ಮತ್ತು ಅವಲಕ್ಷಣ ಎಂಬ ಅಂಶಗಳಿರುತ್ತವೆ. ಯಾವುದು ಲಕ್ಷಣವೋ ಅದು ಜೀವನಕ್ಕೆ ಭೂಷಣ, ಅದಕ್ಕೆ ಯಾವುದೇ ಹೆಚ್ಚುವರಿ ಮಸಾಲ ಅಗತ್ಯವಿಲ್ಲ, ಹಾಗೆಯೇ ಯಾವುದು ಅವಲಕ್ಷಣವೋ ಅದು ಎಂದಿಗೂ ಸಹಜವಾಗಲಾರದು. ಸಹಜತೆಗೆ ವಿರುದ್ಧವಾಗಿ ನಡೆದುಕೊಳ್ಳುವ ಎಲ್ಲ ಕ್ರಿಯೆಗಳು ಕೈತೋರಿಸಿ ಅವಲಕ್ಷಣ ಮಾಡಿಸಿಕೊಂಡಂತೆ ಎಂಬುದು ಸುಳ್ಳಲ್ಲ. ಆದುದರಿಂದಲೇ ನಡೆನುಡಿ ನಾಟಕೀಯವಾಗಿರದೆ ಸಹಜತೆಯಿಂದ ಕೂಡಿರಬೇಕು. ದಿನ ಸಾಯುವವರ ಮುಂದೆ ಅಳುವವರು ಯಾರು ಎಂಬಂತೆ ಆಗಬಾರದು. ಸಹಜ ಜೀವನವೇ ಬಾಳಿಗೆ ಬಂಗಾರ.